ಸಿ. ಸಿ. ನಂ.- 1132/2023

ಸಿ.ಡಬ್ಲ್ಯೂ- 09 / ಪಿ.ಡಬ್ಲ್ಯೂ- 04

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 16-06-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ತಿಪ್ಪೆಸ್ವಾಮಿ |
| ತಂದೆಯ ಹೆಸರು - | ಮರಿಯಪ್ಪ |
| ವಯಸ್ಸು - | 52 ವರ್ಷಗಳು |
| ಉದ್ಯೋಗ - | ವ್ಯವಸಾಯ |
| ವಾಸಸ್ಥಳ - | ಪಿ.ಕೆ.ಹಳ್ಳಿ ಗ್ರಾಮ, ಹೊಸಪೇಟೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಸಾಕ್ಷಿ ನಿಪಿ 2 ಪಂಚನಾಮೆ ಮೇಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿ.ಪಿ.- 2-ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 3 ರಿಂದ 5 ಭಾವಚಿತ್ರದಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ದಿಃ 18.08.2023 ರಂದು ಟಿಬಿ ಡ್ಯಾಂ ರಸ್ತೆಯಲ್ಲಿರುವ ಶನಿಮಹಾತ್ಮ ದೇವಸ್ಥಾನದ ಹತ್ತಿರ ಪೊಲೀಸರು ಹೇಳಿದಂತೆ ಚಾಸಾ 13 ರವರು ನನ್ನನ್ನು ಕರೆಯಿಸಿದ್ದರು. ಸ್ಥಳದಲ್ಲಿ ಅಪಘಾತ ಆಗಿದೆ ಎಂದು ಪೊಲೀಸರು ತಿಳಿಸಿದರು. ಆಗ ಆ ಸ್ಥಳದಲ್ಲಿ ಬೈಕ್ ಹಾಗೂ ಒಂದು ಕಾರ್ ಇತ್ತು. ಸದರಿ ಸ್ಥಳದಲ್ಲಿ ಪಂಚನಾಮೆ ಬರೆಯಲಾಯಿತು ಅದಕ್ಕೆ ನಾನು ಸಾಕ್ಷಿಯಾಹಿ ಸಹಿ ಮಾಡಿರುತ್ತೇನೆ.

ಸಾಕ್ಷಿ ನಿಪಿ 6 ಜಪ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 6 ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 7 ಮತ್ತು 8 ಭಾವಚಿತ್ರಗಳಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಪೊಲೀಸ ಠಾಣೆಯಲ್ಲಿ ಒಂದು ಬೈಕ್ ನ್ನು ತೋರಿಸಿದಾಗ ಪೊಲೀಸರಿಗೆ ಸದರಿ ಬೈಕ್ ನ್ನು ಸ್ಥಳದಲ್ಲಿ ನೋಡಿದ್ದೆವು ಎಂದು ನಾನು ಹೇಳಿದೆ. ಅದರಂತೆ ಸದರಿ ಬೈಕ್ ನ್ನು ಪೊಲೀಸ ಠಾಣೆಯಲ್ಲಿ ಜಪ್ತು ಪಡೆಸಿಕೊಳ್ಳಲಾಯಿತು. ಅದು ಯಮಹಾ ಮೊ.ಸೈ ವಾಹನವಾಗಿರುತ್ತದೆ. ಸದರಿ ಜಪ್ತು ಪಂಚನಾಮೆಯಲ್ಲಿ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಪ್ರಕರಣದ ವಾಸ್ತವಾಂಶ,

ಸಿ. ಸಿ. ನಂ.- 1132/2023

ಸಿ.ಡಬ್ಲ್ಯೂ.- 09 / ಪಿ.ಡಬ್ಲ್ಯೂ.- 04

ಅಭಿಯೋಜನೆಯ ದಾಖಲೆಗಳು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರೀಶಿಲಿಸಿ ಸಕಾರಣ ಕಂಡು ಬಂದಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀಸವಾಲು- ಮಾನ್ಯ ಎ. ಪಿ. ಪಿ. ಅವರಿಂದ-

ದಿಃ 18.08.2023 ರಂದು ಅರ್ ಟಿ ಓ ಚೆಕ್ ಪೋಸ್ಟ್ ಬಳಿ ಇರುವ ಓವರ್ ಹೆಡ್ ಟ್ಯಾಕ್ ಬಳಿ ಒಂದು ಅಪಘಾತವಾಗಿದ್ದು ಚಾಸಾ 13 ರವರು, ಒಂದು ಇನೋವಾ ಕಾರ್ ಮೊ.ಸೈ ಗೆ ಅಪಘಾತ ಪಡೆಸಿದ ಜಾಗ ಇದೇ ಎಂದು ತೋರಿಸಿದ್ದು ಅದರಂತೆ ಪೋಲೀಸರು ಸ್ಥಳ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ. ಸದರಿ ಪಂಚಾನಾಮೆಯನ್ನು ಸಂಜೆ 4.00 ರಿಂದ 5 ರವರೆಗೆ ಜರುಗಿಸಲಾಯಿತು ಎಂದರೆ ಸರಿ. ನಿಪಿ 6 ಜಪ್ತು ಪಂಚನಾಮೆಯನ್ನು ಸಂಜೆ 5.30 ರಿಂದ 6.30 ರವರೆಗೆ ಜರುಗಿಸಲಾಯಿತು ಎಂದರೆ ಸರಿ. ಚಾಸಾ 13 ರವರು ಮೊ.ಸೈ ನ್ನು ತೋರಿಸಿದಕ್ಕೆ ಅದರಂತೆ ನಿಪಿ 6 ಜಪ್ತು ಪಂಚನಾಮೆಯನ್ನು ಜರುಗಿಸಿ ವಾಹನವನ್ನು ಜಪ್ತು ಪಡೆಸಿಕೊಳ್ಳಲಾಯಿತು ಎಂದರೆ ಸರಿ.

ಪಾಟೀಸವಾಲು- 2 ನೇ ಆರೋಪಿ ಪರ ವಕೀಲರಾದ ಶ್ರೀ ಬಿ ಸಿ ಎಂ ರವರಿಂದ-

ಚಾಸಾ 10 ನಮ್ಮ ಊರಿನವರು ಎಂದರೆ ಸರಿ. ನಾನು ಹಲವಾರು ಪ್ರಕರಣಗಳಿಗೆ ಪಂಚನಾಗಿ ಸಾಕ್ಷ್ಯ ನುಡಿಯಲು ಮಾನ್ಯ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಏನಾದರೂ ವ್ಯಾಜ್ಯ ಅದರೆ ಅದಕ್ಕೆ ಸಂಬಂದಪಟ್ಟಂತೆ ಠಾಣೆಗೆ ಸಾಮಾನ್ಯವಾಗಿ ಓಡಾಡುತ್ತೇನೆ ಎಂದರೆ ಸರಿ. ನಾನು ಸಮಾಜ ಸೇವಕನಾಗಿರುತ್ತೇನೆ ಎಂದು ಪೋಲೀಸರು ಅವರು ಹಲವಾರು ಪ್ರಕರಣಗಳಿಗೆ ಪಂಚನಾಗಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಚಾಸಾ 10, ಮೃತ ಆರೋಪಿ ನಂಃ 1, ಚಾಸಾ 1 ರವರು ಒಂದೇ ಸಮಾಜದವರು ಎಂದರೆ ಸರಿ. ಚಾಸಾ 10 ರವರು ಅವರ ಸಮಾಜದವರು ಒಬ್ಬರು ಮೃತಪಟ್ಟಿರುತ್ತಾರೆ ಎಂದು ಹೇಳಿ ನನ್ನನ್ನು ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ.

ನನಗೆ ಓದಲು ಬರುತ್ತದೆ. ನಾನು ಎರಡೂ ಸಹಿಗಳನ್ನು ಪೋಲೀಸ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸಾಕ್ಷಿ ಒಂದು ಸಹಿಯನ್ನು ಸ್ಥಳದಲ್ಲಿ ಮಾಡಿರುತ್ತೇನೆ ಇನ್ನೊಂದು ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಪೂರ್ವಕ್ಕೆ ಓವರ್ ಟ್ಯಾಕ್, ಪಶ್ಚಿಮಕ್ಕೆ ಗುಡ್ಡ, ಉತ್ತರ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. ನಾನು ಘಟನಾ ಸ್ಥಳಕ್ಕೆ ಹೋಗದೆ ಇದ್ದರು

ಸಿ. ಸಿ. ನಂ.- **1132/2023**

ಸಿ.ಡಬ್ಲ್ಯೂ- **09** / ಪಿ.ಡಬ್ಲ್ಯೂ- **04**

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಯಾವ ಕ್ಯಾಮರಾದಿಂದ ತೆಗೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ನಿಪಿ 7 ಮತ್ತು 8 ಭಾವಚಿತ್ರವನ್ನು ತೋರಿಸಿದಾಗ ಅದರಲ್ಲಿರುವ ಮೊ.ಸೈ ನ್ನು ಅವರು ಠಾಣೆಯಲ್ಲಿ ನೋಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮೊ.ಸೈ ನ ಮುಂದಿನ ಗಾಲಿ ಹಾಗೂ ಹ್ಯಾಂಡಲ್ ಬೆಂಡ್ ಆಗಿರುತ್ತದೆ ಎಂದರೆ ಸರಿ. ಸದರಿ ವಾಹನದ ಹಿಂದಿನ ಭಾಗ ಯಾವುದೇ ರೀತಿ ಜಖಂಗೊಂಡಿಲ್ಲ ಎಂದರೆ ಸರಿ. ನಿಪಿ 2 ಪಂಚನಾಮೆಯಲ್ಲಿರುವ ಮಾಹಿತಿ ನನಗೆ ಈಗ ಸ್ಪಷ್ಟ ಹೇಳಲಾಗುವುದಿಲ್ಲ. ನಿಪಿ 6 ಜಪ್ತು ಪಂಚನಾಮೆಯಲ್ಲಿರುವ ಮಾಹಿತಿ ಗೊತ್ತಿದೆ. ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಪಂಚನಾಮೆಗಳನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ನಾನು ಸಮಾಜಸೇವಕನಾಗಿದ್ದರಿಂದ ಹಾಗೂ ಮೃತ ವ್ಯಕ್ತಿ ಚಾಸಾ **10** ರವರಿಗೆ ಸಂಬಂಧಿಕನಾಗಿದ್ದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.